**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 219/2019**

ಸಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | - | ಆರ್.ಶ್ರೀನಿವಾಸ |
| ತಂದೆಯ ಹೆಸರು | - | ರಾಜಪ್ಪ |
| ವಯಸ್ಸು | - | 58 ವರ್ಷ |
| ಕೆಲಸ | - | ಎ.ಎಸ್.ಐ, ಇಲವಾಲ್ ಪೋಲಿಸ್ ಠಾಣೆ |
| ವಾಸ | - | ಮೈಸೂರು |

**ದಿನಾಂಕ 19-12-2023 ರಂದು ಸಾಕ್ಷಿಯನ್ನು ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಯನ್ನು ಸಾಕ್ಷಿ ಮಾನ್ಯ ಎಪಿಪಿಯವರಿಂದ**

2021 ರ ಜನವರಿಯಿಂದ ಮೇ 2023 ವರೆಗೆ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25.08.2022 ರಂದು ನಾನು ಈ ಪ್ರಕರಣದ ಆರೋಪಿಯಾದ ಸ್ವಾಮಿ ಬಿನ್ ಅಮಾಸೇಗೌಡ, ಸೊಳ್ಳೇಪುರ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲೆ ರವರ ವಿರುದ್ದ ಮಾನ್ಯ ನ್ಯಾಯಾಲಯದ ಉದ್ಘೋಷಣಾ ಆದೇಶದ ಮೇರೆಗೆ ಮೇಲ್ಕಂಡ ವಿಳಾಸಕ್ಕೆ ಹೋಗಿ ಅಲ್ಲಿದ್ದ ಆರೋಪಿಯ ಮನೆಯ ಬಳಿ ಹೋಗಿ ಸಾರ್ವಜನಿಕರಲ್ಲಿ ನಾನು ವಿಚಾರಿಸಿದಾಗ ಪಂಚರರಾದ ಕುಮಾರ ಮತ್ತು ಸ್ವಾಮಿ ರವರ ಸಮಕ್ಷಮ ಆರೋಪಿಯ ಬಗ್ಗೆ ವಿಚಾರಣೆ ಮಾಡಿದಾಗ ಸದರಿ ಆರೋಪಿಯು ಈ ಮನೆಯನ್ನು 3 ವರ್ಷದ ಹಿಂದೆ ಖಾಲಿ ಮಾಡಿಕೊಂಡು ಹೋಗಿರುತ್ತಾರೆ ಇಲ್ಲಿಯತನಕ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯಿತಿ ಪೌರ ಕಾರ್ಮಿಕರಿಂದ ಸದರಿ ಗ್ರಾಮದಲ್ಲಿ ಟಾಮ್ ಟಾಮ್ ಹೊಡಿಸಲಾಯಿತು. ಸದರಿ ಉದ್ಘೋಷಣಾ ಆದೇಶದ ಪ್ರತಿಯನ್ನು ಸದರಿ ಗ್ರಾಮದ ಅಂಗನವಾಡಿ ಕಟ್ಟಡದ ಗೋಡೆಗೆ ಪ್ರತಿಯನ್ನು ಅಂಟಿಸಿ ಸದರಿ ಸ್ಥಳದಲ್ಲಿ ಮಹಜರ್ ನ್ನು ಬೆಳಿಗ್ಗೆ 11 ಗಂಟೆಯಿಂದ 11.40 ಗಂಟೆಯವರೆಗೆ ಮಾಡಿರುತ್ತೇನೆ. ಸಾಕ್ಷಿ ಸದರಿ ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರ್ ನ್ನು ನಿಪಿ 1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಂತರ ಮತ್ತೊಂದು ಪ್ರತಿಯನ್ನು ಕೆ ಆರ್ ನಗರ ನ್ಯಾಯಾಲಯದ ಸೂಚನಾ ಫಲಕದ ಮೇಲೆ ಅಂಟಿಸಿರುತ್ತೇನೆ.

2. ದಿಃ 25.08.2022 ರಂದು ನಾನು ಈ ಪ್ರಕರಣದ ಆರೋಪಿಯಾದ ಪ್ರವೀಣ ಬಿನ್ ನಂಜಂಡ, ಕಿಕ್ಕೇರಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲೆ ರವರ ವಿರುದ್ದ ಮಾನ್ಯ ನ್ಯಾಯಾಲಯದ ಉದ್ಘೋಷಣಾ ಆದೇಶದ ಮೇರೆಗೆ ಮೇಲ್ಕಂಡ ವಿಳಾಸಕ್ಕೆ ಹೋಗಿ ಅಲ್ಲಿದ್ದ ಆರೋಪಿಯ ಮನೆಯ ಬಳಿ ಹೋಗಿ ಸಾರ್ವಜನಿಕರಲ್ಲಿ ನಾನು ವಿಚಾರಿಸಿದಾಗ ಪಂಚರರಾದ ಬೈರ ಮತ್ತು ಸ್ವಾಮಿ ರವರ ಸಮಕ್ಷಮ ಆರೋಪಿಯ ಬಗ್ಗೆ ವಿಚಾರಣೆ ಮಾಡಿದಾಗ ಸದರಿ ಆರೋಪಿಯ ಬಾಡಿಗೆ ಮನೆಯನ್ನು 3-4 ವರ್ಷದ ಹಿಂದೆ ಖಾಲಿ ಮಾಡಿಕೊಂಡು ಹೋಗಿರುತ್ತಾರೆ ಇಲ್ಲಿಯತನಕ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯಿತಿ ಪೌರ ಕಾರ್ಮಿಕರಿಂದ ಸದರಿ ಗ್ರಾಮದಲ್ಲಿ ಟಾಮ್ ಟಾಮ್ ಹೊಡಿಸಲಾಯಿತು. ಸದರಿ ಉದ್ಘೋಷಣಾ ಆದೇಶದ ಪ್ರತಿಯನ್ನು ಸದರಿ ಗ್ರಾಮದ ಬಸ್ ನಿಲ್ದಾಣದ ಗೋಡೆಗೆ ಪ್ರತಿಯನ್ನು ಅಂಟಿಸಿ ಸದರಿ ಸ್ಥಳದಲ್ಲಿ ಮಹಜರ್ ನ್ನು ಮದ್ಯಾಹ್ನ 2 ಗಂಟೆಯಿಂದ 02.45 ಗಂಟೆಯವರೆಗೆ ಮಾಡಿರುತ್ತೇನೆ. ಸಾಕ್ಷಿ ಸದರಿ ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರ್ ನ್ನು ನಿಪಿ 2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನಂತರ ಮತ್ತೊಂದು ಪ್ರತಿಯನ್ನು ಕೆ ಆರ್ ನಗರ ನ್ಯಾಯಾಲಯದ ಸೂಚನಾ ಫಲಕದ ಮೇಲೆ ಅಂಟಿಸಿರುತ್ತೇನೆ.

**ಮರು ವಿಚಾರಣೆ** - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಪವಿತ್ರ.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ